# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

## ಸಿ. ಸಿ. ಸಂಖ್ಯೆ: 1209/24

ಪಿಡಬ್ಲ್ಯು: – 1

<u>ದಿನಾಂಕಃ 27.10.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು</u>.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ. ಎಸ್ ಎಸ್ ಬಿ ರವರಿಂದಃ–</u>

ನಾನು ಸಂಪಾಜೆ ಗ್ರಾಮದಲ್ಲಿ 30 ವರ್ಷಗಳಿಂದ ವಾಸವಾಗಿದ್ದೇನೆ. ನಾನು 2016 ರಿಂದ ಜೆ ಸಿ ಬಿ, ಹಿಟ್ಯಾಚಿಯಿಂದ ಅರ್ಥ್ ವರ್ಕ್ ಕೆಲಸ ಮಾಡುತ್ತೇನೆ. 2020 ರಲ್ಲಿ ಆರೋಪಿ ನನಗೆ ಪರಿಚಯ ಆಗಿರುತ್ತಾರೆ. ನಾನು Cat company ಯ ಜೆ ಸಿ ಬಿ ಯನ್ನು ಆರೋಪಿಗೆ ರೂ.14,00,000/–ಕ್ಕೆ ಮಾರಾಟ ಮಾಡಿದ್ದೆ, ಆ ರೀತಿ ಆರೋಪಿ ನನಗೆ ಪರಿಚಯ. ಆರೋಪಿ ಆ ಹಣವನ್ನು ಪೂರ್ತಿ ನನಗೆ ಪಾವತಿ ಮಾಡಿರುತ್ತಾರೆ.

ಆರೋಪಿಯ ಅಣ್ಣ ನಿತಿನ್ ನನಗೆ ಗೊತ್ತು. ನಾನು 2020 ರಲ್ಲಿ ಜೆ ಸಿ ಬಿಯನ್ನು ನಿತಿನ್ ಅವರಿಗೆ ಮಾರಾಟ ಮಾಡಿರುತ್ತೇನೆ ಆರೋಪಿಗಲ್ಲ ಎಂದರೆ ಸರಿ. ಸದರಿ ಜೆ ಸಿ ಬಿ ಯ ಆರ್ ಸಿ ಕೂಡ ನನ್ನ ಹೆಸರಿನಿಂದ ನಿತಿನ್ ಅವರ ಹೆಸರಿಗೆ ವರ್ಗಾವಣೆ ಆಗಿದೆ ಎಂದರೆ ಸರಿ. ನಿತಿನ್ ಅವರು ಶ್ರೀ ರಾಮ್ ಫೈನಾನ್ಸ್, ಮೂಡಬಿದ್ರೆಯಲ್ಲಿ ಸಾಲ ಮಾಡಿ ಸ್ವಲ್ಪ ಹಣ ಪಾವತಿ ಮಾಡಿದ್ದರು ಎಂದರೆ ಸರಿ. ಇನ್ನುಳಿದ ಹಣವನ್ನು ನಗದು ಮೂಲಕ ನಗದು ಮೂಲಕ ನಿತಿನ್ ರವರು ಪಾವತಿ ಮಾಡಿದ್ದಾರೆ ಎಂದರೆ ಸರಿ. ನಿತಿನ್ ಅವರು ಜೆ ಸಿ ಬಿಯನ್ನು ನನ್ನಿಂದ ತೆಗೆದುಕೊಂಡು ಹೋಗುವಾಗ ಅವರೂ ಇನ್ನೂ ಸ್ವಲ್ಪ ಹಣ ಪಾವ ತಿ ಮಾಡಲು ಬಾಕಿ ಇತ್ತು ಎಂದರೆ ಸರಿ. ನಿತಿನ್ ರವರು ಉಳಿದ ರೂ.1,50,000/– ಹಣ ಪಾವತಿ ಮಾಡಬೇಕಾಗಿತ್ತು. ನಾನು ನಿತಿನ್ ಗೆ ಜೆ ಸಿ ಬಸಿ ಮಾರಾಟ ಮಾಡುವಾಗ ನಿತಿನ್, ಆರೋಪಿ ಹಾಗೂ ಒಬ್ಬ ಜೆ ಸಿ ಬಿ ಆಪರೇಟರ್ ಬಂದಿದ್ದ. ಉಳಿದ ರೂ.1,50,000/– ಹಣವನ್ನು ನಿತಿನ್ ರವರು ಚೆಕ್ ಮುಖಾಂತರ ಮತ್ತು ಫೋನ್ ಪೇ ಮುಖಾಂತರ ಪಾವತಿ ಮಾಡಿರುತ್ತಾರೆ. ಆರೋಪಿಗೆ ಮತ್ತೊಬ್ಬ ಸಹೋದರ ಇದ್ದು, ಅವರ ಹೆಸರು ನಿಶ್ಚಲ್ ಎಂದರೆ ನನಗೆ ಗೊತ್ತಿಲ್ಲ. ನಿತಿನ್ ಪಾವತಿ ಮಾಡಬೇಕಾಗಿದ್ದ ಉಳಿದ ರೂ.1,50,000/– ಹಣಕ್ಕೆ ಭದ್ರತೆಗೆಂದು ನೀವೇನಾದರು ಅವರಿಂದ ದಾಖಲೆಗಳನ್ನು ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜೆ ಸಿ ಬಿಯನ್ನು ಮಾರಾಟ ಮಾಡುವ ಮೊದಲು ನನಗೆ ನಿತಿನ್ ರವರ ಪರಿಚಯ ಇರಲಿಲ್ಲ. Cat company ಯ ಟೆಕ್ನಿಷನ್ ಒಬ್ಬರು ನನಗೆ ನಿತಿನ್‌ರನ್ನು ಪರಿಚಯ

ಮಾಡಿಕೊಟ್ಟರು. ಆ ಸದರಿ ಟೆಕ್ನಿಷನ್ ಈಗ ಮಂಗಳೂರಿನಲ್ಲಿ ಇದ್ದಾರೆ, ಅವರು ನನಗೆ 2016 ರಿಂದ ಗೊತ್ತು. ನಿತಿನ್ ಪಾವತಿ ಮಾಡಬೇಕಾಗಿದ್ದ ರೂ.1,50,000/- ಹಣವನ್ನು ಯಾವ ಯಾವ ದಿನಾಂಕಗಳಲ್ಲಿ ನನಗೆ ಪಾವತಿ ಮಾಡಿದ್ದಾರೆ ಎಂದು ಈಗ ನನಗೆ ನೆನಪಿಲ್ಲ. ನಿತಿನ್ ಪಾವತಿ ಮಾಡಬೇಕಾಗಿದ್ದ ರೂ.1,50,000/- ಬಾಕಿ ಹಣದ ಭದ್ರತೆಗೆಂದು ನಾನು ಆರೋಪಿಯಿಂದ ಅವರ ನಿಪಿ-1 ಚೆಕ್ಕನ್ನು ಪಡೆದುಕೊಂಡಿದ್ದೆ ಎಂದರೆ ಸರಿಯಲ್ಲ. ದಿಃ 08.06.2021 ರಂದು ಆರೋಪಿಯ ಸಹೋದರರಾದ ನಿಶ್ಚಲ್ ರವರು ನೆಟ್ ಬ್ಯಾಂಕಿಂಗ್ ಮುಖಾಂತರ ಬಾಕಿ ಹಣದ ಪೈಕಿ ನನಗೆ ರೂ.25,000/-ವನ್ನು ಪಾವತಿ ಮಾಡಿದ್ದಾರೆ ಎಂದರೆ ಇರಬಹುದು. ದಿಃ 22.006.2021 ಕ್ಕೆ ನಿಶ್ಚಲ್ ರವರು ರೂ.25,000/- ಹಣವನ್ನು ಗೂಗಲ್ ಪೇ ಮುಖಾಂತರ ನನಗೆ ಪಾವತಿ ಮಾಡಿದ್ದಾರೆ ಎಂದರೆ ಇರಬಹುದು. ದಿಃ 01.07.2021 ರಂದು ನಿಶ್ಚಲ್ ರವರು ರೂ.25,000/- ಹಣವನ್ನು ನನಗೆ ನೆಟ್ ಬ್ಯಾಂಕಿಂಗ್ ಮುಖಾಂತರ ಪಾವತಿ ಮಾಡಿದ್ದಾರೆ ಎಂದರೆ ಸರಿ. ದಿಃ 01.02.2022 ಕ್ಕೆ ನಿಶ್ಚಲ್ ರವರು ಚೆಕ್ ಮುಖಾಂತರ ರೂ.12,000/- ಹಣವನ್ನು ಪಾವತಿ ಮಾಡಿದ್ದಾರೆ ಎಂದರೆ ಇರಬಹುದು. ದಿಃ 17.02.2022 ರಂದು ನಿಶ್ಚಲ್ ರವರು ಚೆಕ್ ಮುಖಾಂತರ ರೂ.15,000/- ಹಣವನ್ನು ಪಾವತಿ ಮಾಡಿದ್ದಾರೆ ಎಂದರೆ ಸರಿ. ದಿಃ 04.03.2022 ರಂದು ನಿಶ್ಚಲ್ ರವರು ಚೆಕ್ ಮುಖಾಂತರ ರೂ.15,000/- ಹಣವನ್ನು ಪಾವತಿ ಮಾಡಿದ್ದಾರೆ ಎಂದರೆ ಸರಿ. ಸದರಿ ಜೆ ಸಿ ಬಿ ಯ ವ್ಯವಹಾರ ಆದ ಮೇಲೆ ನಿಮಗೂ ಮತ್ತು ಆರೋಪಿ ಹಾಗೂ ಇಬ್ಬ ರು ಸಹೋದರರ ನಡುವೆ ಏನಾದರು ವ್ಯವಹಾರ ಇತ್ತಾ ಎಂದರೆ ಡಿಸೆಂಬರ್-2023ರಲ್ಲಿ ಆರೋಪಿ ನನಗೆ ಫೋನ್ ಮಾಡಿ ರೂ.2,20,000/- ಹಣ ಬೇಕು ಎಂದು ನನಗೆ ಕೇಳಿದ್ದರು, ಆಗ ನಾನು ಅದನ್ನು ಅವರಿಗೆ ನಗದು ರೂಪದಲ್ಲಿ ಸಾಲ ನೀಡಿದ್ದೇನೆ, ಆಗ ನನಗೆ ಆರೋಪಿ ನಿಪಿ-1 ಚೆಕ್ಕನ್ನು ನೀಡಿದ್ದರು. ಜೆ ಸಿ ಬಿ ವ್ಯವಹಾರ ಆದ ಮೇಲೆ ಮತ್ತು ಡಿಸೆಂಬರ್-2023 ರ ಮಧ್ಯೆ ನಮ್ಮ ಆರೋಪಿಯ ನಡುವೆ ಯಾವುದೇ ವ್ಯವಹಾರ ಆಗಿಲ್ಲ.

ನಾನು ಆರೋಪಿ ಮನೆಗೆ ಹೋಗಿಲ್ಲ. ಆರೋಪಿ ಸದರಿ ಸಾಲ ಪಡೆದುಕೊಳ್ಳಲು ನಮ್ಮ ಮನೆಗೆ ಬಂದಿದ್ದರು. ಆರೋಪಿಯ ಮೊಬೈಲ್ ಸಂಖ್ಯೆ ನನಗೆ ಈಗ ನೆನಪಿಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಕಲಾಪದ ವೇಳೆ ಮುಗಿದಿದ್ದರಿಂದ ಪಾಟಿ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-***

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಮಡಿಕೇರಿ.